1. ಕರ್ನಾಟಕದಲ್ಲಿ ಪರಿಸರ ಅನುಮತಿ ಮತ್ತು ಗಣಿಗಾರಿಕೆ ಅಭಿವೃದ್ಧಿಗೆ ಸಂಬಂಧಿಸಿದಂತೆ, ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

ಹೇಳಿಕೆ (a) : ಇತ್ತೀಚೆಗೆ ಕೇಂದ್ರ ಪರಿಸರ ಸಚಿವಾಲಯವು ಕರ್ನಾಟಕದ 702 ಎಕರೆ ಅರಣ್ಯ ಪ್ರದೇಶದಲ್ಲಿ ಕಬ್ಬಿಣದ ಅದಿರು ಶೋಧನೆಗೆ ಅನುಮತಿ ನೀಡಿದೆ.

ಹೇಳಿಕೆ (b) : ಶೋಧನೆಗೆ ಮೀಸಲಾಗಿರುವ ಈ ಉದ್ದೇಶಿತ ಅರಣ್ಯ ಭೂಮಿ ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲ್ಲೂಕಿನಲ್ಲಿದೆ.

ಕೆಳಗಿನ ಸಂಕೇತಗಳನ್ನು ಬಳಸಿ ಸರಿಯಾದ ಉತ್ತರ ಆಯ್ಕೆ ಮಾಡಿ.

(1) (a) ಮತ್ತು (b) ಎರಡೂ ಸರಿಯಾಗಿವೆ.
(2) (a) ಮಾತ್ರ ಸರಿ.
(3) (a) ಮತ್ತು (b) ಎರಡೂ ಸರಿಯಾಗಿಲ್ಲ.
(4) (b) ಮಾತ್ರ ಸರಿ.

2. ಪಟ್ಟಿ-I ಅನ್ನು ಪಟ್ಟಿ-II ರ ಜೊತೆ ಹೊಂದಿಸಿ ಸರಿಯಾದ ಉತ್ತರವನ್ನು ಆರಿಸಿ.

| | ಪಟ್ಟಿ-I (ಕಪ್) | | ಪಟ್ಟಿ-II (ಕ್ರೀಡೆ) |
|---|---|---|---|
| a. | ದುಲೀಪ್ ಟ್ರೋಫಿ | i. | ಟೆನ್ನಿಸ್ |
| b. | ರೈಡರ್ ಕಪ್ | ii. | ಕ್ರಿಕೆಟ್ |
| c. | ಥಾಮಸ್ ಕಪ್ | iii. | ಗಾಲ್ಫ್ |
| d. | ಡೇವಿಸ್ ಕಪ್ | iv. | ಬ್ಯಾಡ್ಮಿಂಟನ್ |

(1) a-iv, b-ii, c-iii, d-i
(2) a-ii, b-iii, c-iv, d-i
(3) a-i, b-iv, c-ii, d-iii
(4) a-ii, b-i, c-iv, d-iii

3. ಗ್ರ್ಯಾಂಡ್ ಬ್ಯಾಂಕ್ ಮತ್ತು ಜಾರ್ಜಸ್ ಬ್ಯಾಂಕ್‌ಗಳು ಪ್ರಸಿದ್ಧವಾಗಿರುವುದು :

(1) ಸಮುದ್ರ ಮೀನುಗಾರಿಕೆ
(2) ಪೆಟ್ರೋಲಿಯಂ ಉತ್ಪಾದನೆ
(3) ನೈಸರ್ಗಿಕ ಅನಿಲ ಉತ್ಪಾದನೆ
(4) ಕಲ್ಲಿದ್ದಲು ಉತ್ಪಾದನೆ

4. NATO ಕುರಿತಾದ ಈ ಕೆಳಗಿನ ಯಾವ ಹೇಳಿಕೆಗಳು ಸರಿಯಾಗಿವೆ ?

(a) ಪ್ರಸ್ತುತ NATO ದಲ್ಲಿ ಒಟ್ಟು 32 ಸದಸ್ಯ ರಾಷ್ಟ್ರಗಳಿವೆ.
(b) ಇಟಲಿ, ಸ್ಪೇನ್, ನಾರ್ವೆ, ಉಕ್ರೇನ್, ಸ್ವೀಡನ್‌ಗಳೂ ಕೂಡ NATOದ ಸದಸ್ಯ ರಾಷ್ಟ್ರಗಳಾಗಿವೆ.
(c) 1949 ರಲ್ಲಿ NATO ಸ್ಥಾಪನೆಯಾಗಿರುತ್ತದೆ.
(d) ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕಾದ ನೇತೃತ್ವದಲ್ಲಿ NATO ಕಾರ್ಯ ನಿರ್ವಹಿಸುತ್ತಿದೆ.

(1) (a) ಮತ್ತು (c)
(2) (a) ಮತ್ತು (b)
(3) (b) ಮತ್ತು (c)
(4) (c) ಮತ್ತು (d)

5. ಜೂನ್ 28, 2026 ರಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಸೇಶೆಲ್ಸ್ ರಾಷ್ಟ್ರದ ಅಧ್ಯಕ್ಷರಾದ ಡಾ. ಪ್ಯಾಟ್ರಿಕ್ ಹರ್ಮಿನ್‌ರವರು ಈ ಕೆಳಗಿನ ಯಾವ ಪ್ರಶಸ್ತಿಯನ್ನು ಮೋದಿಯವರ ಹಸಿರು ನಾಯಕತ್ವ ಮತ್ತು ಸಾಗರ ಸಂಪನ್ಮೂಲಗಳ ಸುಸ್ಥಿರ ನಿರ್ವಹಣೆ, ಸಣ್ಣ ದ್ವೀಪ ರಾಜ್ಯಗಳ ಅಭಿವೃದ್ಧಿಯ ಆಕಾಂಕ್ಷೆ ಮುಂತಾದ ವಿಷಯಗಳಿಗಾಗಿ ನೀಡಿದರು ?

(1) ದ ಆರ್ಡರ್ ಆಫ್ ದ ಡ್ರೂಕ್ ಗ್ಯಾಲ್ಪೊ
(2) ಗಾರ್ಡಿಯನ್ ಆಫ್ ದಿ ಬ್ಲೂ ಹಾರಿಜಾನ್
(3) ಗ್ರ್ಯಾಂಡ್ ಕ್ರಾಸ್ ಆಫ್ ದ ಲೀಜನ್ ಆಫ್ ಹಾನರ್
(4) ಆರ್ಡರ್ ಆಫ್ ದ ವೈಟ್ ಡಬಲ್ ಕ್ರಾಸ್

ಕಚ್ಚಾ ಕಾರ್ಯಕ್ಕಾಗಿ ಸ್ಥಳ



Scanned with OKEN Scanner

6. ಭಾರತೀಯ ವಾಯುಪಡೆಯ ಸೂರ್ಯ ಕಿರಣ್ ಏರೋಬ್ಯಾಟಿಕ್ ತಂಡವು (SKAT) ಮೇ 2026 ರಲ್ಲಿ ತನ್ನ ಐತಿಹಾಸಿಕ 30ನೇ ವರ್ಷಾಚರಣೆಯನ್ನು ಈ ಕೆಳಗಿನ ಯಾವ ವಾಯುಪಡೆ ನೆಲೆಯಲ್ಲಿ ಅಧಿಕೃತವಾಗಿ ಆಚರಿಸಿತು ?

(1) ಬೆಳಗಾವಿ (2) ಬೀದರ್ (3) ಕಾರವಾರ (4) ಯಲಹಂಕ

7. ಪಟ್ಟಿ-I ನ್ನು ಪಟ್ಟಿ-II ರ ಜೊತೆ ಹೊಂದಿಸಿ, ಸರಿಯಾದ ಉತ್ತರವನ್ನು ಆರಿಸಿ.

| ಪಟ್ಟಿ-I (ಸೌರ ವಿದ್ಯುತ್ ಸ್ಥಾವರದ ಹೆಸರು) | | ಪಟ್ಟಿ-II (ರಾಜ್ಯ) | |
|---|---|---|---|
| a. | ಭಡ್ಲಾ ಸೋಲಾರ್ ಪಾರ್ಕ್ | i. | ತಮಿಳುನಾಡು |
| b. | ಪಾವಗಡ ಸೋಲಾರ್ ಪಾರ್ಕ್ | ii. | ರಾಜಸ್ಥಾನ |
| c. | ಕರ್ನೂಲ್ ಅಲ್ಟ್ರಾ ಮೆಗಾ ಸೋಲಾರ್ ಪಾರ್ಕ್ | iii. | ಕರ್ನಾಟಕ |
| d. | ಕಮುಥಿ ಸೋಲಾರ್ ಪವರ್ ಪ್ರೊಜೆಕ್ಟ್ | iv. | ಆಂಧ್ರ ಪ್ರದೇಶ |
| | | v. | ಮಧ್ಯಪ್ರದೇಶ |

ಸಂಕೇತಗಳು :

(1) a-ii, b-iii, c-iv, d-i
(2) a-v, b-i, c-iii, d-ii
(3) a-ii, b-iii, c-i, d-iv
(4) a-ii, b-iv, c-v, d-iii

8. ಈ ಕೆಳಗಿನವುಗಳಲ್ಲಿ ಯಾವುದು ಕೃಷ್ಣಾ ನದಿಯ ಉಪನದಿಯಲ್ಲ ?

(1) ಮಲಪ್ರಭಾ (2) ಕೊಯ್ನಾ (3) ಮಂಜ್ರಾ (4) ಘಟಪ್ರಭಾ

9. ಪಟ್ಟಿ-I ನ್ನು ಪಟ್ಟಿ-II ರ ಜೊತೆ ಹೊಂದಿಸಿ, ಸರಿಯಾದ ಉತ್ತರವನ್ನು ಆರಿಸಿ.

| ಪಟ್ಟಿ-I (ರೈಲ್ವೆ ವಲಯ) | | ಪಟ್ಟಿ-II (ಕೇಂದ್ರ ಕಚೇರಿ) | |
|---|---|---|---|
| a. | ಉತ್ತರ ರೈಲ್ವೆ | i. | ಹುಬ್ಬಳ್ಳಿ |
| b. | ದಕ್ಷಿಣ ರೈಲ್ವೆ | ii. | ನವ ದೆಹಲಿ |
| c. | ನೈರುತ್ಯ ರೈಲ್ವೆ | iii. | ಜೈಪುರ |
| d. | ವಾಯವ್ಯ ರೈಲ್ವೆ | iv. | ಚೆನ್ನೈ |

ಸಂಕೇತಗಳು :

(1) a-ii, b-i, c-iv, d-iii
(2) a-iv, b-iii, c-ii, d-i
(3) a-i, b-ii, c-iii, d-iv
(4) a-ii, b-iv, c-i, d-iii

10. ಇಂಡಿಯನ್ ಪ್ರೀಮಿಯರ್ ಲೀಗ್‌ಗೆ(IPL) ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆ/ಹೇಳಿಕೆಗಳು ಸರಿಯಾಗಿದೆ/ವೆ ?

(a) ರಾಜಸ್ಥಾನ್ ರಾಯಲ್ಸ್ ಪ್ರಥಮ ಐಪಿಎಲ್ ಟ್ರೋಫಿ ವಿಜೇತರು.
(b) ಕಗಿಸೋ ರಬಾಡಾ 2026 ರ ಪರ್ಪಲ್ ಕ್ಯಾಪ್‌ನ ವಿಜೇತರಾಗಿದ್ದಾರೆ.
(c) R.C.B. ಮತ್ತು K.K.R. ತಂಡಗಳು ಅತೀ ಹೆಚ್ಚು ಬಾರಿ ಐಪಿಎಲ್ ಟ್ರೋಫಿಯನ್ನು ಗೆದ್ದಿರುವ ಕೀರ್ತಿ ಹೊಂದಿವೆ.
(d) ಕ್ರಿಸ್ ಗೇಲ್ ವೈಯಕ್ತಿಕವಾಗಿ ಅತೀ ಹೆಚ್ಚು ರನ್ ಗಳಿಸಿರುವ ಆಟಗಾರ.

(1) (a) ಮತ್ತು (c) ಸರಿಯಾಗಿವೆ
(2) (a), (c) ಮತ್ತು (d) ಸರಿಯಾಗಿವೆ
(3) (a), (b) ಮತ್ತು (c) ಸರಿಯಾಗಿವೆ
(4) (a), (b) ಮತ್ತು (d) ಸರಿಯಾಗಿವೆ

11. ಈ ಕೆಳಗಿನವುಗಳಲ್ಲಿ ಯಾವ ರಾಷ್ಟ್ರಗಳು ಜಂಟಿಯಾಗಿ 2026 ನೇ ಸಾಲಿನ FIFA ವಿಶ್ವ ಕಪ್ ಅನ್ನು ಆಯೋಜಿಸಿದ್ದವು ?

(1) ಕೆನಡಾ, ಮೆಕ್ಸಿಕೋ ಮತ್ತು ಬ್ರೆಜಿಲ್
(2) ಯುಎಸ್, ಕೆನಡಾ ಮತ್ತು ಮೆಕ್ಸಿಕೋ
(3) ಯುಎಸ್, ಕೆನಡಾ ಮತ್ತು ಜಮೈಕಾ
(4) ಯುಎಸ್, ಮೆಕ್ಸಿಕೋ ಮತ್ತು ಯುಕೆ

ಕಚ್ಚಾ ಕಾರ್ಯಕ್ಕಾಗಿ ಸ್ಥಳ

369570



Scanned with OKEN Scanner

12. ಕರ್ನಾಟಕದ ರಾಷ್ಟ್ರೀಯ ಉದ್ಯಾನವನಗಳನ್ನು ನಕ್ಷೆಯಲ್ಲಿ ಗುರುತಿಸಿ.




(1) (a) ಬನ್ನೇರುಘಟ್ಟ, (b) ನಾಗರಹೊಳೆ, (c) ಬಂಡೀಪುರ, (d) ಕುದುರೆಮುಖ

(2) (a) ಕುದುರೆಮುಖ, (b) ಬಂಡೀಪುರ, (c) ನಾಗರಹೊಳೆ, (d) ಬನ್ನೇರುಘಟ್ಟ

(3) (a) ಬನ್ನೇರುಘಟ್ಟ, (b) ಬಂಡೀಪುರ, (c) ನಾಗರಹೊಳೆ, (d) ಕುದುರೆಮುಖ

(4) (a) ಕುದುರೆಮುಖ, (b) ನಾಗರಹೊಳೆ, (c) ಬಂಡೀಪುರ, (d) ಬನ್ನೇರುಘಟ್ಟ

13. ಈ ಕೆಳಗಿನ ಯಾವ ISRO ಉಪಗ್ರಹವನ್ನು ಸಂಪರ್ಕ ಉದ್ದೇಶಕ್ಕೆ ಬಳಸಲಾಗುತ್ತಿದೆ ?

(1) ಇನ್ಸಾಟ್-1A (2) ಚಂದ್ರಯಾನ-1 (3) ಕಾರ್ಟೊಸ್ಯಾಟ್-3 (4) ಆರ್ಯಭಟ

14. "ಹಾಲೋಕ್ಲೈನ್" ಎನ್ನುವುದು :

(1) ಸಮಾನ ಲವಣಾಂಶವನ್ನು ಹೊಂದಿರುವ ಸ್ಥಳಗಳನ್ನು ಸೇರಿಸುವ ರೇಖೆ.

(2) ಆಳದೊಂದಿಗೆ ವೇಗವಾಗಿ ಬದಲಾಗುವ ಲವಣಾಂಶದ ಪದರ.

(3) ಸಾಗರ ತಳದ ರಿಲೀಫ್‌ಗಳಲ್ಲಿರುವ ಖಾಲಿ ಸಮತಲಗಳನ್ನು ಸೇರಿಸುವ ರೇಖೆ.

(4) ಶೂನ್ಯ ಲವಣಾಂಶವನ್ನು ಹೊಂದಿರುವ ಸ್ಥಳಗಳನ್ನು ಸೇರಿಸುವ ರೇಖೆ.

15. ಜಪಾನ್‌ನ ದಕ್ಷಿಣದಲ್ಲಿ ನಿಶಿನೋ-ಶಿಮಾ ಎನ್ನುವ ಹೊಸ ದ್ವೀಪವು ನಿರ್ಮಾಣವಾಗಿರುವುದು

(1) ಜ್ವಾಲಾಮುಖಿ ಸ್ಫೋಟ ಮತ್ತು ಲಾವಾ ಹರಿವಿನಿಂದ

(2) ನದಿಗಳಿಂದ ಉಂಟಾದ ಮೆಕ್ಕಲು ಮಣ್ಣಿನ ಶೇಖರಣೆಯಿಂದ

(3) ಭೂ ಫಲಕಗಳ ಚಲನಾ ಪ್ರಕ್ರಿಯೆಯಿಂದ

(4) ಹವಳದ ಜೀವಿಗಳಿಂದ

16. 2023 ರಲ್ಲಿ ಕರ್ನಾಟಕದಲ್ಲಿ ಒಂದು ಜಿಲ್ಲೆ ಒಂದು ಉತ್ಪನ್ನ (ODOP) ಯೋಜನೆಯಡಿಯಲ್ಲಿ ಕಿನ್ನಾಳ ಗೊಂಬೆಗಳ ತಯಾರಿಕೆಯನ್ನು __________ ಜಿಲ್ಲೆಗೆ ಹಂಚಿಕೆ ಮಾಡಲಾಗಿದೆ.

(1) ಕೊಪ್ಪಳ (2) ಹಾವೇರಿ (3) ಬಾಗಲಕೋಟೆ (4) ವಿಜಯಪುರ

17. ಈ ಕೆಳಗಿನ ಭಾಷೆಗಳನ್ನು ಪರಿಗಣಿಸಿ.

(a) ಥಾಯ್ (b) ಲ್ಯಾಟಿನ್ (c) ಹಿಂದಿ (d) ಕ್ವಾ (e) ಐರಿಷ್

ಮೇಲಿನ ಭಾಷೆಗಳಲ್ಲಿ ಯಾವುವು ಇಂಡೋ – ಯುರೋಪಿನ್ ಭಾಷೆಗಳಾಗಿವೆ ?

(1) (b), (c) ಮತ್ತು (e) (2) (a), (b), (d) ಮತ್ತು (e) (3) (c), (d) ಮತ್ತು (e) (4) (b), (c) ಮತ್ತು (d)

ಕಚ್ಚಾ ಕಾರ್ಯಕ್ಕಾಗಿ ಸ್ಥಳ

18. ಈ ಕೆಳಗಿನವು ಯಾವುದರ ತಳಿಗಳಾಗಿವೆ ?

(a) ಬಾಂಬಿಕ್ಸ್ (b) ಮುಗಾ (c) ಈರಿ (d) ಟಸ್ಸಾರ್

(1) ಕುರಿಯ ತಳಿಗಳು
(2) ರೇಷ್ಮೆಹುಳು ತಳಿಗಳು
(3) ಜೇನುನೊಣದ ತಳಿಗಳು
(4) ಹಸುವಿನ ತಳಿಗಳು

19. ಈ ಕೆಳಗಿನ ಭಾರತ ಸಂವಿಧಾನದ ಯಾವ ವಿಧಿಯು, ರಾಜ್ಯಪಾಲರು ರಾಜ್ಯ ಶಾಸಕಾಂಗದಿಂದ ಅಂಗೀಕೃತವಾದ ಮಸೂದೆಯನ್ನು ರಾಷ್ಟ್ರಪತಿಗಳ ಪರಿಶೀಲನೆಗಾಗಿ ಕಾಯ್ದಿರಿಸುವುದನ್ನು ವಿವರಿಸಿದೆ ?

(1) ವಿಧಿ 206 (2) ವಿಧಿ 200 (3) ವಿಧಿ 208 (4) ವಿಧಿ 204

20. ಪಟ್ಟಿ-I ನ್ನು ಪಟ್ಟಿ-II ರ ಜೊತೆ ಹೊಂದಿಸಿ, ಸರಿಯಾದ ಉತ್ತರವನ್ನು ಆರಿಸಿ.

| | ಪಟ್ಟಿ-I (ಆಯೋಗಗಳು) | | ಪಟ್ಟಿ-II (ಸ್ಥಾಪನೆಯ ಉದ್ದೇಶ) |
|---|---|---|---|
| a. | ಸರ್ಕಾರಿಯಾ ಆಯೋಗ | i. | 1975-77 ರ ತುರ್ತು ಪರಿಸ್ಥಿತಿ |
| b. | ಶಾಹ್ ಆಯೋಗ | ii. | ಧಾರ್ಮಿಕ ಮತ್ತು ಭಾಷಾ ಅಲ್ಪ ಸಂಖ್ಯಾತರ ಸಮಸ್ಯೆಗಳು |
| c. | ನಾನಾವತಿ ಆಯೋಗ | iii. | ಕೇಂದ್ರ – ರಾಜ್ಯ ಸಂಬಂಧಗಳು |
| d. | ರಂಗನಾಥ ಮಿಶ್ರಾ ಆಯೋಗ | iv. | 1984 ರ ಸಿಖ್ಖ್ ದಂಗೆಗಳ ತನಿಖೆ |

(1) a-iii, b-i, c-ii, d-iv
(2) a-ii, b-iii, c-i, d-iv
(3) a-iv, b-iii, c-i, d-ii
(4) a-iii, b-i, c-iv, d-ii

21. ಭಾರತದಲ್ಲಿ ಮೊದಲ ಬಾರಿಗೆ ಯಾವ ರಾಜ್ಯದ ಮೇಲೆ ರಾಷ್ಟ್ರಪತಿ ಆಳ್ವಿಕೆಯನ್ನು ಜಾರಿಗೊಳಿಸಲಾಯಿತು ?

(1) ಕರ್ನಾಟಕ (2) ಜಮ್ಮು ಮತ್ತು ಕಾಶ್ಮೀರ (3) ಪಂಜಾಬ್ (4) ಗುಜರಾತ್

22. ಭಾರತದ ಸಂವಿಧಾನದ ಯಾವ ವಿಧಿಯು ಸುಪ್ರೀಂ ಕೋರ್ಟ್‌ನ ಸ್ಥಾಪನೆಗೆ ಅವಕಾಶ ಕಲ್ಪಿಸುತ್ತದೆ ?

(1) 134 ನೇ ವಿಧಿ (2) 124 ನೇ ವಿಧಿ (3) 144 ನೇ ವಿಧಿ (4) 124A ವಿಧಿ

23. 2011 ರ ಜನಗಣತಿಯ ಪ್ರಕಾರ, ಕರ್ನಾಟಕ ಜಿಲ್ಲೆಗಳ ನಗರ ಜನಸಂಖ್ಯೆಯ ಶೇಕಡಾವಾರು ಪ್ರಮಾಣವನ್ನು ಇಳಿಕೆ ಕ್ರಮದಲ್ಲಿ ಗುರುತಿಸಿ.

(1) ಮೈಸೂರು, ದಕ್ಷಿಣ ಕನ್ನಡ, ಧಾರವಾಡ, ಗದಗ, ದಾವಣಗೆರೆ, ಬಳ್ಳಾರಿ
(2) ಮೈಸೂರು, ಧಾರವಾಡ, ದಕ್ಷಿಣ ಕನ್ನಡ, ಬಳ್ಳಾರಿ, ಗದಗ, ದಾವಣಗೆರೆ
(3) ಧಾರವಾಡ, ಮೈಸೂರು, ದಾವಣಗೆರೆ, ದಕ್ಷಿಣ ಕನ್ನಡ, ಬಳ್ಳಾರಿ, ಗದಗ
(4) ಧಾರವಾಡ, ದಕ್ಷಿಣ ಕನ್ನಡ, ಮೈಸೂರು, ಬಳ್ಳಾರಿ, ಗದಗ, ದಾವಣಗೆರೆ

24. ಈ ಕೆಳಗಿನವುಗಳಲ್ಲಿ ಸರಿಯಾದ ಜೋಡಣೆಯನ್ನು ಗುರುತಿಸಿ.

(a) ಕಬ್ಬು – ಅಶುದ್ಧ ಕಚ್ಚಾವಸ್ತು
(b) ಹತ್ತಿ – ಶುದ್ಧ ಕಚ್ಚಾವಸ್ತು
(c) ಸ್ಥಳಬಂಧನವಿಲ್ಲದ (ಫುಟ್‌ಲೂಸ್) ಕೈಗಾರಿಕೆ – ಗ್ರಾಹಕ ಮಾರುಕಟ್ಟೆ
(d) ಸ್ಟಾರ್ಟ್ ಅಪ್ ಇಂಡಿಯಾ ಯೋಜನೆ – ಕಾರ್ಮಿಕರಿಗೆ ಸಹಕಾರಿ

(1) (a), (b) ಮತ್ತು (d) ಸರಿಯಾಗಿವೆ
(2) (a), (b), (c) ಮತ್ತು (d) ಸರಿಯಾಗಿವೆ
(3) (b), (c) ಮತ್ತು (d) ಸರಿಯಾಗಿವೆ
(4) (a), (b) ಮತ್ತು (c) ಸರಿಯಾಗಿವೆ

ಕಚ್ಚಾ ಕಾರ್ಯಕ್ಕಾಗಿ ಸ್ಥಳ



Scanned with OKEN Scanner

25. ಭಾರತದ ರಾಷ್ಟ್ರಪತಿಗಳ ವೀಟೋ ಅಧಿಕಾರವು ಇವುಗಳ ಸಂಯೋಜನೆಯಾಗಿದೆ.

(a) ಪಾಕೆಟ್ ವೀಟೋ
(b) ಸಂಪೂರ್ಣ ವೀಟೋ
(c) ಸಸ್ಪೆನ್ಸಿವ್ ವೀಟೋ
(d) ಅರ್ಹತಾ ವೀಟೋ

(1) (b), (c) ಮತ್ತು (d)
(2) (b) ಮತ್ತು (c)
(3) (a), (b) ಮತ್ತು (c)
(4) (a), (c) ಮತ್ತು (d)

26. ಯಾರು ಕೇಂದ್ರಾಡಳಿತ ಪ್ರದೇಶಗಳಿಗಾಗಿ ಉಚ್ಚ ನ್ಯಾಯಾಲಯವನ್ನು ಸ್ಥಾಪಿಸಬಹುದು ಅಥವಾ ಅದನ್ನು ಪಕ್ಕದ ರಾಜ್ಯದ ಉಚ್ಚ ನ್ಯಾಯಾಲಯದ ವ್ಯಾಪ್ತಿಗೆ ಒಳಪಡಿಸಬಹುದು ?

(1) ಭಾರತದ ಸುಪ್ರೀಂ ಕೋರ್ಟ್
(2) ರಾಷ್ಟ್ರಪತಿ
(3) ಕೇಂದ್ರ ಕಾನೂನು ಮಂತ್ರಿ
(4) ಸಂಸತ್ತು

27. ಸಂಸತ್ತಿನಲ್ಲಿ 'ವಂದನಾ ನಿರ್ಣಯ' ವನ್ನು ಉದ್ದೇಶಿಸಿ ಮಾತನಾಡುವವರು ಮತ್ತು ಮಂಡಿಸುವವರು

(1) ಲೋಕಸಭೆಯ ಸ್ಪೀಕರ್
(2) ಪ್ರಧಾನ ಮಂತ್ರಿ
(3) ರಾಜ್ಯಸಭೆಯ ಅಧ್ಯಕ್ಷರು
(4) ರಾಷ್ಟ್ರಪತಿ

28. ಭಾರತ ಸಂವಿಧಾನದ ಯಾವ ವಿಧಿ/ವಿಧಿಗಳು ಲಿಂಗ ನ್ಯಾಯಕ್ಕೆ ಸಂಬಂಧಿಸಿದೆ/ವೆ ?

(a) ವಿಧಿ 15
(b) ವಿಧಿ 1
(c) ವಿಧಿ 39
(d) ವಿಧಿ 51A(e)

(1) (a), (b) ಮತ್ತು (c)
(2) (d) ಮಾತ್ರ
(3) (a) ಮತ್ತು (d)
(4) (a), (c) ಮತ್ತು (d)

29. ಮುನ್ನೆಚ್ಚರಿಕೆಯ ಬಂಧನಕ್ಕೆ ಸಂಬಂಧಿಸಿದಂತೆ, ಕೆಳಗಿನ ಯಾವ ಹೇಳಿಕೆಯು ಸರಿಯಾಗಿದೆ ?

(1) ಇದು ಭಾರತ ಸಂವಿಧಾನದ ರಚನೆಕಾರರು ಸೇರಿಸಿದ ಒಂದು ಹೊಸ ಕಲ್ಪನೆಯಾಗಿದೆ.
(2) ಇದನ್ನು ಯುಎಸ್ಎ ಸಂವಿಧಾನದಿಂದ ಪಡೆಯಲಾಗಿದೆ.
(3) ಇದನ್ನು ಐರಿಷ್ ಸಂವಿಧಾನದಿಂದ ಪಡೆಯಲಾಗಿದೆ.
(4) ಇದನ್ನು ಬ್ರಿಟನ್ ಸಂವಿಧಾನದಿಂದ ಪಡೆಯಲಾಗಿದೆ.

30. ಭಾರತದಲ್ಲಿನ ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದಂತೆ ತಪ್ಪಾದ ಹೇಳಿಕೆಯನ್ನು ಗುರುತಿಸಿ.

(1) ಶಾಸಕಾಂಗ ಮತ್ತು ಕಾರ್ಯಾಂಗದ ವಿರುದ್ಧ ಮೂಲಭೂತ ಹಕ್ಕುಗಳನ್ನು ಖಾತರಿಪಡಿಸಲಾಗಿದೆ.
(2) ಮೂಲಭೂತ ಹಕ್ಕುಗಳು ರಾಜ್ಯದ (ಸ್ಟೇಟ್) ವಿರುದ್ಧ ಮಾತ್ರವಲ್ಲ, ಖಾಸಗಿ ವ್ಯಕ್ತಿಗಳ ವಿರುದ್ಧವೂ ಲಭ್ಯವಿವೆ.
(3) ಸೇನಾ ಪಡೆ ಮತ್ತು ಪೋಲೀಸ್ ಪಡೆ ಸದಸ್ಯರಿಗೆ ಸಂಬಂಧಿಸಿದಂತೆ ಮೂಲಭೂತ ಹಕ್ಕುಗಳ ಅನ್ವಯವನ್ನು ಮಾರ್ಪಡಿಸುವ ಅಧಿಕಾರವನ್ನು ಸಂಸತ್ತು ಹೊಂದಿದೆ.
(4) ಎಲ್ಲಾ ಮೂಲಭೂತ ಹಕ್ಕುಗಳನ್ನು ನೇರವಾಗಿ ಜಾರಿಗೊಳಿಸಬಹುದು.

31. ಈ ಕೆಳಗಿನವುಗಳನ್ನು ಆದ್ಯತೆಯ ಶ್ರೇಣಿಯನುಸಾರ ಜೋಡಿಸಿ.

(a) ಅಧ್ಯಕ್ಷರು, ಅಲ್ಪಸಂಖ್ಯಾತರ ಆಯೋಗ
(b) ಸಂಸತ್ತಿನ ಸದಸ್ಯರು
(c) ಮುಖ್ಯ ಚುನಾವಣಾ ಆಯುಕ್ತರು
(d) ಭಾರತದ ಅಟಾರ್ನಿ ಜನರಲ್

(1) (a), (c), (d), (b)
(2) (c), (d), (a), (b)
(3) (c), (a), (b), (d)
(4) (a), (b), (c), (d)

32. ಭಾರತದ ಅಟಾರ್ನಿ ಜನರಲ್‌ರವರ ಅಧಿಕಾರಾವಧಿ

(1) ರಾಷ್ಟ್ರಪತಿಯವರ ಇಚ್ಛೆ ಇರುವವರೆಗೆ.
(2) ಸಂಸತ್ತಿನಿಂದ ನಿರ್ಧರಿಸಲ್ಪಡುತ್ತದೆ.
(3) ಉಪ – ರಾಷ್ಟ್ರಪತಿಯವರ ಇಚ್ಛೆ ಇರುವವರೆಗೆ.
(4) ಭಾರತದ ಚುನಾವಣಾ ಆಯೋಗದಿಂದ ನಿರ್ಧರಿಸಲ್ಪಡುತ್ತದೆ.

---

ಕಚ್ಚಾ ಕಾರ್ಯಕ್ಕಾಗಿ ಸ್ಥಳ



Scanned with OKEN Scanner

33. ಈ ಕೆಳಗಿನ ಯೋಜನೆಗಳನ್ನು ಕಾಲಾನುಕ್ರಮದಲ್ಲಿ ಜೋಡಿಸಿ.

(a) ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಾ ಅಭಿಯಾನ
(b) ಸರ್ವ ಶಿಕ್ಷಾ ಅಭಿಯಾನ
(c) ಉಡಾನ್ (UDAAN)
(d) ಪಢೇ ಭಾರತ್ – ಬಢೇ ಭಾರತ್

(1) (c), (d), (a), (b)
(2) (b), (a), (d), (c)
(3) (a), (c), (d), (b)
(4) (d), (a), (c), (b)

34. ಕೊಟ್ಟಿರುವ ಅಂಶಗಳನ್ನು ಪರಿಗಣಿಸಿ, ಕೃಷಿ ಉತ್ಪಾದನಾ ಬೆಳವಣಿಗೆಯ ನಿರ್ಧಾರಕಗಳನ್ನು ಗುರುತಿಸಿ.

(a) ಭೂಮಿಯ ಒಡೆತನ
(b) ಬೇಡಿಕೆ ಪರಿಸ್ಥಿತಿಗಳು
(c) ರಾಜಕೀಯ ಸ್ಥಿರತೆ
(d) ತಾಂತ್ರಿಕ ಅಂಶಗಳು

(1) (a), (b) ಮತ್ತು (d)
(2) (b), (c) ಮತ್ತು (d)
(3) (a), (c) ಮತ್ತು (d)
(4) (a), (b) ಮತ್ತು (c)

35. ಬೆಂಗಳೂರಿನಲ್ಲಿ ಲಾಲ್‌ಬಾಗ್‌ನ್ನು ನಿರ್ಮಿಸಿದ ರಾಜ ಯಾರು ?

(1) ಮುಮ್ಮಡಿ ಕೃಷ್ಣರಾಜ ಒಡೆಯರ್
(2) ಟಿಪ್ಪು ಸುಲ್ತಾನ್
(3) ಹೈದರಾಲಿ
(4) 1ನೇ ಕೆಂಪೇಗೌಡ

36. ಮಹಮ್ಮದ್ ಬಿನ್ ಖಾಸಿಂ ನೇತೃತ್ವದ ಸೇನೆ ಅಪಾರ ಪ್ರಮಾಣದ ಚಿನ್ನವನ್ನು ದೋಚಿದ ಈ ಕೆಳಗಿನ ಯಾವ ನಗರವು "ಚಿನ್ನದ ನಗರ" ಎಂದು ಜನಪ್ರಿಯವಾಯಿತು ?

(1) ಮುಲ್ತಾನ್
(2) ಬ್ರಾಹ್ಮಣಾಬಾದ್
(3) ಪೇಶಾವರ
(4) ಅರೋರ್

37. ಕೆಳಗಿನ ಪಟ್ಟಿ-I ನ್ನು ಪಟ್ಟಿ-II ರ ಜೊತೆ ಹೊಂದಿಸಿ, ಸರಿಯಾದ ಉತ್ತರವನ್ನು ಆರಿಸಿ.

| ಪಟ್ಟಿ-I (ಆಡಳಿತಾತ್ಮಕ ಪದಗಳು) | | ಪಟ್ಟಿ-II (ಅರ್ಥ) | |
|---|---|---|---|
| a. | ಜಿಲ್-ಇ-ಇಲಾಹಿ | i. | ಸುಲ್ತಾನನ ಮುಂದೆ ಸಾಷ್ಟಾಂಗ ನಮಸ್ಕಾರ |
| b. | ಸಿಜ್ದಾ | ii. | ಗೂಢಾಚಾರರು |
| c. | ಪೈಬೋಸ್ | iii. | ಸುಲ್ತಾನನ ಪಾದಗಳನ್ನು ಚುಂಬಿಸುವುದು |
| d. | ಬರೀದ್ಸ್ | iv. | ದೇವರ ನೆರಳು |

(1) a-iii, b-iv, c-ii, d-i
(2) a-iv, b-i, c-iii, d-ii
(3) a-iii, b-ii, c-i, d-iv
(4) a-ii, b-i, c-iii, d-iv

38. ಮೊದಲನೇ ಪಾಣಿಪತ್ ಯುದ್ಧವು ಯಾವ ವರ್ಷ ಮತ್ತು ಯಾರ ನಡುವೆ ನಡೆಯಿತು ?

(1) ಕ್ರಿ.ಶ. 1535 – ಬಾಬರ್ ಮತ್ತು ರಾಣಾ ಸಂಗ
(2) ಕ್ರಿ.ಶ. 1542 – ಬಾಬರ್ ಮತ್ತು ಸಿಕಂದರ್ ಶಾಹ್
(3) ಕ್ರಿ.ಶ. 1529 – ಬಾಬರ್ ಮತ್ತು ಮಹಮ್ಮದ್ ಲೋದಿ
(4) ಕ್ರಿ.ಶ. 1526 – ಬಾಬರ್ ಮತ್ತು ಇಬ್ರಾಹಿಂ ಲೋದಿ

39. ಭಾರತ ಸಂವಿಧಾನ ರಚನಾ ಸಭೆಯ ಸಾಂವಿಧಾನಿಕ ಸಲಹೆಗಾರರು ಯಾರಾಗಿದ್ದರು ?

(1) ನಂದ ಲಾಲ್ ಬೋಸ್
(2) ಬಿ.ಎನ್. ರಾವ್
(3) ವಸಂತ್ ಕೃಷ್ಣ ವೈದ್ಯ
(4) ಪ್ರೇಮ್ ಬಿಹಾರಿ ನರೈನ್ ರೈಜಾದಾ

40. ಭಾರತ ಯಾವ ಕಾಲಾವಧಿಯಲ್ಲಿ ಡೊಮಿನಿಯನ್ ಸ್ಥಾನಮಾನ ಹೊಂದಿತ್ತು ?

(1) 9 ಡಿಸೆಂಬರ್, 1946 – 26 ನವೆಂಬರ್, 1949
(2) 15 ಆಗಸ್ಟ್, 1947 – 26 ಜನವರಿ, 1950
(3) 9 ಡಿಸೆಂಬರ್, 1946 – 26 ಜನವರಿ, 1950
(4) 15 ಆಗಸ್ಟ್, 1947 – 26 ನವೆಂಬರ್, 1949

---

ಕಚ್ಚಾ ಕಾರ್ಯಕ್ಕಾಗಿ ಸ್ಥಳ



SHIKARAT shikarat.com
Scanned with OKEN Scanner

41. ಗುಪ್ತರ ಕಾಲಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಹೇಳಿಕೆಗಳನ್ನು ಪರಿಗಣಿಸಿ.

ಹೇಳಿಕೆ I : ಗುಪ್ತರ ಕಾಲವನ್ನು ಸಂಸ್ಕೃತ ವ್ಯಾಕರಣದ 'ಸುವರ್ಣ ಯುಗ' ಎಂದು ಕರೆಯುತ್ತಾರೆ.

ಹೇಳಿಕೆ II : ಸಂಸ್ಕೃತ ವ್ಯಾಕರಣವು ಪಾಣಿನಿ, ಪತಂಜಲಿ, ಅಮರಸಿಂಹ ಮತ್ತು ಚಂದ್ರಗೋಮಿನರ ಸಂಕಲನಗಳಿಂದ ಅಭಿವೃದ್ಧಿ ಹೊಂದಿದೆ.

ಮೇಲಿನ ಹೇಳಿಕೆಗಳಿಗೆ ಸಂಬಂಧಿಸಿದಂತೆ ಈ ಕೆಳಗಿನವುಗಳಲ್ಲಿ ಸರಿಯಾದ ಉತ್ತರ ಯಾವುದೆಂದು ಆಯ್ಕೆ ಮಾಡಿ.

(1) ಹೇಳಿಕೆ I ಸರಿ ಆದರೆ ಹೇಳಿಕೆ II ತಪ್ಪು.

(2) ಹೇಳಿಕೆ-I ಮತ್ತು ಹೇಳಿಕೆ-II ಎರಡೂ ಸರಿ, ಮತ್ತು ಹೇಳಿಕೆ-I ಅನ್ನು ಹೇಳಿಕೆ-II ವಿವರಿಸುತ್ತದೆ.

(3) ಹೇಳಿಕೆ I ತಪ್ಪು ಆದರೆ ಹೇಳಿಕೆ II ಸರಿ.

(4) ಹೇಳಿಕೆ-I ಮತ್ತು ಹೇಳಿಕೆ-II ಎರಡೂ ಸರಿ, ಆದರೆ ಹೇಳಿಕೆ-I ಅನ್ನು ಹೇಳಿಕೆ-II ವಿವರಿಸುವುದಿಲ್ಲ.

42. ಭಾರತದಲ್ಲಿ ರೋಮನ್ನರು ಯಾರೊಂದಿಗೆ ಮೊಟ್ಟಮೊದಲು ವ್ಯಾಪಾರ ಆರಂಭಿಸಿದರು ?

(1) ಶಕ ರಾಜ್ಯಗಳು
(2) ಶಾತವಾಹನರು
(3) ಮಗಧ ಸಾಮ್ರಾಜ್ಯ
(4) ತಮಿಳು ರಾಜ್ಯಗಳು

43. ಕೆಳಗಿನವುಗಳಲ್ಲಿ ತಪ್ಪಾದ ಜೋಡಿಗಳನ್ನು ಗುರುತಿಸಿ.

| | | | |
|---|---|---|---|
| a. | ಸ್ವದೇಶ ಮಿತ್ರನ್ | – | ದಯಾಳ್ ಸಿಂಗ್ |
| b. | ಟ್ರಿಬ್ಯೂನ್ | – | ಜಿ.ಎಸ್. ಐಯ್ಯರ್ |
| c. | ರಾಸ್ಟ್ ಗೋಫ್ತಾರ್ | – | ದಾದಾಬಾಯಿ ನವರೋಜಿ |
| d. | ಇಂಡಿಯನ್ ಮಿರರ್ | – | ದೇವೇಂದ್ರನಾಥ ಠ್ಯಾಗೋರ್ |

ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

(1) c ಮತ್ತು d
(2) a ಮತ್ತು b
(3) a ಮತ್ತು d
(4) b ಮತ್ತು c

44. ಕೆಳಗಿನ ಹೇಳಿಕೆಗಳಲ್ಲಿ ಸರಿಯಾದವುಗಳನ್ನು ಗುರುತಿಸಿ, ಕೊಟ್ಟಿರುವ ಸಂಕೇತಗಳಿಂದ ಆರಿಸಿ.

(a) 2ನೇ ಶಿವಮಾರನು ಕನ್ನಡದಲ್ಲಿ 'ಗಜಾಷ್ಟಕ' ಕೃತಿ ಬರೆದನು.

(b) 'ಗಜಾಷ್ಟಕ'ವನ್ನು 'ಒನಕೆ ಹಾಡು' ಎಂದು ಕರೆಯಲಾಗಿದೆ.

(c) 2ನೇ ಶಿವಮಾರನು ಗಂಗರ ಒಬ್ಬ ಪ್ರಸಿದ್ಧ ದೊರೆ.

(d) 2ನೇ ಶಿವಮಾರನು ಕ್ರಿ.ಶ. 726 ರಿಂದ – ಕ್ರಿ.ಶ. 787 ರವರೆಗೆ ಆಳಿದನು.

(1) (a), (b) ಮತ್ತು (c) ಸರಿಯಾಗಿವೆ.
(2) (a), (b), (c) ಮತ್ತು (d) ಸರಿಯಾಗಿವೆ.
(3) (b) ಮತ್ತು (d) ಸರಿಯಾಗಿವೆ.
(4) (a) ಮತ್ತು (d) ಸರಿಯಾಗಿವೆ.

45. ಮೌರ್ಯರ ಕಾಲದಲ್ಲಿ, 'ಸಮಾಹರ್ತ' ನೆಂಬ ಅಧಿಕಾರಿಯು ನಿರ್ವಹಿಸುತ್ತಿದ್ದ ಕರ್ತವ್ಯ ________.

(1) ಖಜಾನೆ ಮುಖ್ಯಸ್ಥ
(2) ಕರ ಸಂಗ್ರಾಹಕ
(3) ಜಿಲ್ಲಾಡಳಿತದ ಮುಖ್ಯಸ್ಥ
(4) ಗಣಿಗಳ ಮುಖ್ಯಸ್ಥ

ಕಚ್ಚಾ ಕಾರ್ಯಕ್ಕಾಗಿ ಸ್ಥಳ



Scanned with OKEN Scanner

46. ಮಯೂರ ವರ್ಮನ ಚಂದ್ರವಳ್ಳಿ ಬಂಡೆಗಲ್ಲು ಶಾಸನವು ಮುಖ್ಯವಾಗಿ ಈ ಕೆಳಗಿನ ಯಾವುದರ ನಿರ್ಮಾಣವನ್ನು ದಾಖಲಿಸಿದೆ ?

(1) ಅರಮನೆ (2) ಜೈನ ಬಸದಿ (3) ಬೌದ್ಧ ಸ್ತೂಪ (4) ಹೊಂಡ (ಕೆರೆ)

47. ಈ ಕೆಳಗಿನವುಗಳಲ್ಲಿ ಯಾವುವು ಕಲ್ಯಾಣ ಚಾಲುಕ್ಯರ ರಾಜಧಾನಿಗಳಾಗಿದ್ದವು ?

a. ಮಾನ್ಯ ಖೇಟ b. ಕಲ್ಯಾಣ c. ಏತಗಿರಿ d. ಬಾದಾಮಿ

ಕೆಳಗಿನ ಸಂಕೇತಗಳನ್ನು ಬಳಸಿ ಸರಿಯಾದ ಉತ್ತರ ಆರಿಸಿ.

(1) b ಮತ್ತು c (2) a ಮತ್ತು b (3) a, b ಮತ್ತು c (4) b, c ಮತ್ತು d

48. ದೀನಬಂಧು ಮಿತ್ರರವರ ನಾಟಕ 'ನೀಲ್ ದರ್ಪಣ್' ಯಾವ ಭಾಷೆಯಲ್ಲಿದೆ ?

(1) ಹಿಂದಿ (2) ಬಂಗಾಳಿ (3) ತಮಿಳು (4) ಮರಾಠಿ

49. ವಾಂಡಿವಾಷ್ ಯುದ್ಧವು ಭಾರತದಲ್ಲಿ ಯಾರ ರಾಜಕೀಯ ಮತ್ತು ಸೇನಾ ಆಕಾಂಕ್ಷೆಗಳನ್ನು ಧ್ವಂಸಗೊಳಿಸಿತು ?

(1) ಡಚ್ (2) ಫ್ರೆಂಚ್ (3) ಪೋರ್ಚುಗೀಸ್ (4) ಬ್ರಿಟೀಷ್

50. ಲಾರ್ಡ್ ಇರ್ವಿನ್ ಗೆ ಸಂಬಂಧಿಸಿದಂತೆ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

ಹೇಳಿಕೆ I : ಇವರು ಭಾರತದಲ್ಲಿ ಮಹಿಳಾ ವಿಶ್ವವಿದ್ಯಾನಿಲಯವನ್ನು ಬಾಂಬೆಯಲ್ಲಿ ಸ್ಥಾಪಿಸಿದರು.

ಹೇಳಿಕೆ II : ಇವರು ಮೊದಲ ದುಂಡು ಮೇಜಿನ ಸಮ್ಮೇಳನದಲ್ಲಿ ಭಾಗವಹಿಸುವಂತೆ ಗಾಂಧೀಜಿಯವರ ಮನವೊಲಿಸಿದರು.

ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

(1) I ಮತ್ತು II ಎರಡೂ ಸರಿ (2) I ಮಾತ್ರ ಸರಿ

(3) I ಮತ್ತು II ಎರಡೂ ತಪ್ಪು (4) II ಮಾತ್ರ ಸರಿ

51. ಮೈಸೂರು ರಾಜ್ಯದ ________ ಎಂಬಲ್ಲಿ ಸರ್ಕಾರದಿಂದ ನಿರ್ವಹಿಸಲ್ಪಟ್ಟ ಮೊದಲ ಖಾದಿ ಉತ್ಪಾದನಾ ಘಟಕವನ್ನು ಸ್ಥಾಪಿಸಲಾಯಿತು.

(1) ಶಿವಮೊಗ್ಗ (2) ಬದನವಾಳು (3) ಮೈಸೂರು (4) ಭದ್ರಾವತಿ

52. ಬ್ರಿಟೀಷರಿಗೆ ಬಂಗಾಳದಲ್ಲಿ ಉಚಿತ ವ್ಯಾಪಾರ ಮಾಡುವ ಆಜ್ಞೆಯನ್ನು ಹೊರಡಿಸಿದ ಮೊಘಲ್ ಚಕ್ರವರ್ತಿ ಯಾರು ?

(1) ಫರೂಕ್ ಸಿಯಾರ್ (2) ಜಹಾಂಗೀರ್ (3) ಬಹದ್ದೂರ್ ಷಾ (4) ಷಹಜಹಾನ್

53. ಈ ಕೆಳಗಿನವುಗಳಲ್ಲಿ ಎಷ್ಟು ಜೋಡಿಗಳು ಸರಿಯಾಗಿ ಹೊಂದಾಣಿಕೆಯಾಗಿವೆ ?

a. ಅಶ್ವಘೋಷ – ಸೌಂದರಾನಂದ

b. ಭರತ – ನಾಟ್ಯಶಾಸ್ತ್ರ

c. ವಾತ್ಸಾಯನ – ಕಾಮಸೂತ್ರ

d. ಹರ್ಷ – ಹರ್ಷಚರಿತೆ

(1) ಮೂರು ಮಾತ್ರ (2) ಒಂದು ಮಾತ್ರ

(3) ಎಲ್ಲಾ ನಾಲ್ಕೂ (4) ಎರಡು ಮಾತ್ರ

54. ಈ ಕೆಳಗಿನ ಯಾವ ಕಾಲಾವಧಿಗೆ 'ಸೂಕ್ಷ್ಮ ಶಿಲಾಯುಧ' (microliths) ಸಂಬಂಧಪಟ್ಟಿದೆ ?

(1) ನವ ಶಿಲಾಯುಗ (2) ಹಳೆಯ ಶಿಲಾಯುಗ (3) ಕಂಚಿನ ಯುಗ (4) ಮಧ್ಯ ಶಿಲಾಯುಗ

ಕಚ್ಚಾ ಕಾರ್ಯಕ್ಕಾಗಿ ಸ್ಥಳ



Scanned with OKEN Scanner

55. ಸರಿಯಾಗಿ ಹೊಂದಾಣಿಕೆಯಾಗಿರುವ ಜೋಡಿಗಳನ್ನು ಗುರುತಿಸಿ ಮತ್ತು ಕೆಳಗೆ ಕೊಟ್ಟಿರುವ ಸಂಕೇತಗಳಿಂದ ಸರಿಯುತ್ತರ ಆರಿಸಿ.

| | ಕ್ರೀಡೆಗಳು | | ಆಟಗಾರರ ಸಂಖ್ಯೆ |
|---|---|---|---|
| (a) | ಖೋ-ಖೋ | – | 09 |
| (b) | ಹಾಕಿ | – | 14 |
| (c) | ಕ್ರಿಕೆಟ್ | – | 16 |
| (d) | ಕಬಡ್ಡಿ | – | 07 |

(1) (a) ಮತ್ತು (d) ಸರಿಯಾಗಿವೆ
(2) (a), (b), (c) ಮತ್ತು (d) ಸರಿಯಾಗಿವೆ
(3) (a), (c) ಮತ್ತು (d) ಸರಿಯಾಗಿವೆ
(4) (b) ಮತ್ತು (d) ಸರಿಯಾಗಿವೆ

56. ಈ ಕೆಳಗಿನವುಗಳಲ್ಲಿ ಸರಿಯಾಗಿ ಹೊಂದಿಕೆಯಾಗಿರುವ ಜೋಡಿಗಳನ್ನು ಗುರುತಿಸಿ :

(a) ಡ್ಯೂಸ್ – ಟೆನ್ನಿಸ್
(b) ಪೆನಾಲ್ಟಿ ಸ್ಟ್ರೋಕ್ – ಫುಟ್‌ಬಾಲ್
(c) ಪೆನಾಲ್ಟಿ ಕಿಕ್ – ಹಾಕಿ
(d) ಫ್ರೀ ಹಿಟ್ – ಕ್ರಿಕೆಟ್

(1) (a), (b) ಮತ್ತು (d) (2) (a), (b), (c) ಮತ್ತು (d) (3) (a), (c) ಮತ್ತು (d) (4) (a) ಮತ್ತು (d)

57. ಇಂಟಿಗ್ರೇಟೆಡ್ ಚೈಲ್ಡ್ ಡೆವಲಪ್‌ಮೆಂಟ್ ಸರ್ವೀಸಸ್ (ICDS) ಅಡಿಯಲ್ಲಿ ಇರುವ "ಪೋಷಣ್ ಅಭಿಯಾನ್"ದ ಧ್ಯೇಯವಾಕ್ಯ:

(1) ಜೀವಿತದ ಮೊದಲ ಮೂರು ವರ್ಷಗಳಲ್ಲಿ ಮೆದುಳಿನ ಬೆಳವಣಿಗೆಯನ್ನು ಗರಿಷ್ಠಗೊಳಿಸುವುದು.
(2) ಜೀವಿತದ ಮೊದಲ ಆರು ವರ್ಷಗಳಲ್ಲಿ ಮೆದುಳಿನ ಬೆಳವಣಿಗೆಯನ್ನು ಗರಿಷ್ಠಗೊಳಿಸುವುದು.
(3) ಜೀವಿತದ ಮೊದಲ ಏಳು ವರ್ಷಗಳಲ್ಲಿ ಮೆದುಳಿನ ಬೆಳವಣಿಗೆಯನ್ನು ಗರಿಷ್ಠಗೊಳಿಸುವುದು.
(4) ಜೀವಿತದ ಮೊದಲ ಐದು ವರ್ಷಗಳಲ್ಲಿ ಮೆದುಳಿನ ಬೆಳವಣಿಗೆಯನ್ನು ಗರಿಷ್ಠಗೊಳಿಸುವುದು.

58. 'NAMASTE' - ವಿಸ್ತರಿಸಿ.

(1) ನ್ಯಾಷನಲ್ ಆ್ಯಕ್ಷನ್ ಫಾರ್ ಮೆಡಿಕಲ್ ಸೈನ್ಸ್ ಎಜುಕೇಶನ್.
(2) ನ್ಯಾಷನಲ್ ಆ್ಯಕ್ಷನ್ ಫಾರ್ ಮೆಕಾನೈಸ್ಡ್ ಸ್ಯಾನಿಟೇಶನ್ ಇಕೋಸಿಸ್ಟಮ್.
(3) ನ್ಯಾಷನಲ್ ಆ್ಯಕ್ಷನ್ ಫಾರ್ ಮೆಕಾನೈಸ್ಡ್ ಸಸ್ಟೇನಬಲ್ ಎನ್ವಿರಾನ್‌ಮೆಂಟ್.
(4) ನ್ಯಾಷನಲ್ ಅಸೋಸಿಯೇಷನ್ ಫಾರ್ ಮೆಕಾನೈಸ್ಡ್ ಸ್ಯಾನಿಟೇಶನ್ ಇಕೋಸಿಸ್ಟಮ್.

59. ಭೌಗೋಳಿಕ ಸೂಚಕಗಳ ಪೇಟೆಂಟ್ ವಿಷಯವು WTO ದ ಬಹುಪಕ್ಷೀಯ ಒಪ್ಪಂದಗಳಲ್ಲಿ ಈ ಕೆಳಗಿನ ಯಾವುದರ ಅಡಿಯಲ್ಲಿ ಬರುತ್ತದೆ ?

(1) TRIPs (2) GATT (3) TRIMs (4) GATS

60. ಈ ಕೆಳಕಂಡ ಯಾವ ಸ್ಥಳದಲ್ಲಿ ಶಾತವಾಹನರ ಚೈತ್ಯಗಳು ಕಂಡು ಬರುವುದಿಲ್ಲ ?

(1) ಕನ್ಹೇರಿ (2) ಕಾರ್ಲೆ (3) ಅಹಿಚ್ಛತ್ರ (4) ನಾಸಿಕ್

61. ಕರ್ನಾಟಕದ ಏಕೀಕರಣಕ್ಕಾಗಿ ಸಿದ್ದಪ್ಪ ಕಂಬಳಿ ರವರ ಅಧ್ಯಕ್ಷತೆಯಲ್ಲಿ ಮೊದಲ ಸಮ್ಮೇಳನ ನಡೆದ ಸ್ಥಳ –

(1) ಧಾರವಾಡ (2) ಹುಬ್ಬಳ್ಳಿ (3) ಬೆಂಗಳೂರು (4) ಬೆಳಗಾವಿ

ಕಚ್ಚಾ ಕಾರ್ಯಕ್ಕಾಗಿ ಸ್ಥಳ



Scanned with OKEN Scanner

62. ಈ ಕೆಳಗಿನವುಗಳಲ್ಲಿ, ಪರಿಸರ ವ್ಯವಸ್ಥೆಯಲ್ಲಿನ ಶಕ್ತಿಯ ಹರಿವನ್ನು ತೋರಿಸುವ ಸರಿಯಾದ ಅನುಕ್ರಮ ಯಾವುದು ?
(a) ಮಾಂಸಾಹಾರಿಗಳು (b) ಸಸ್ಯಾಹಾರಿಗಳು
(c) ಸೌರ ಬೆಳಕು (d) ಉತ್ಪಾದಕಗಳು
(1) (c), (d), (b), (a) (2) (a), (b), (c), (d) (3) (d), (c), (b), (a) (4) (d), (b), (a), (c)

63. ಸಾವಯವ ಕೀಟನಾಶಕವಾದ ಡಿಡಿಟಿ ಯಲ್ಲಿ ಪ್ರಮುಖವಾಗಿರುವುದು
(1) ಕ್ಲೋರಿನ್ (2) ಸಾರಜನಕ (3) ಗಂಧಕ (4) ಆಮ್ಲಜನಕ

64. ಈ ಕೆಳಗಿನವುಗಳಲ್ಲಿ ಕೃತಕ ಸೂಚಕ
(1) ಮಿಥೈಲ್ ಆರೆಂಜ್ (2) ಅರಿಶಿಣ
(3) ಕೆಂಪು ಕ್ಯಾಬೇಜ್ ಎಲೆಗಳು (4) ಲಿಟ್ಮಸ್

65. ಈ ಕೆಳಗಿನ ಯಾವ STI/s (ಲೈಂಗಿಕ ಸಂಪರ್ಕದಿಂದ ಹರಡುವ ರೋಗ)ಗಳನ್ನು ಶೀಘ್ರವಾಗಿ ಪತ್ತೆ ಹಚ್ಚಿದರೆ ಮತ್ತು ಸರಿಯಾದ ಚಿಕಿತ್ಸೆ ನೀಡಿದರೆ ಸಂಪೂರ್ಣವಾಗಿ ಗುಣಪಡಿಸಬಹುದು ?
(a) ಹೆಪಟೈಟಿಸ್ – ಬಿ (b) ಸಿಫಿಲಿಸ್ (c) ಜನನಾಂಗದ ಹರ್ಪಿಸ್ (d) ಹೆಚ್.ಐ.ವಿ./ಏಡ್ಸ್
(1) (a), (b) ಮತ್ತು (c) (2) (a) ಮತ್ತು (b) (3) (b) ಮಾತ್ರ (4) (b) ಮತ್ತು (c)

66. Bt. ಹತ್ತಿಯ ಸಸ್ಯವು ಈ ಕೆಳಗಿನ ಯಾವುದಕ್ಕೆ ಪ್ರತಿರೋಧವನ್ನು ತೋರಿಸುತ್ತದೆ ?
(1) ಶಿಲೀಂಧ್ರಗಳು (2) ಬ್ಯಾಕ್ಟೀರಿಯಾ (3) ವೈರಸ್‌ಗಳು (4) ಕೀಟಗಳು

67. ಪಟ್ಟಿ-I ರಲ್ಲಿರುವುದನ್ನು ಪಟ್ಟಿ-II ರಲ್ಲಿರುವುದರೊಂದಿಗೆ ಹೊಂದಿಸಿ, ಸರಿಯಾದ ಉತ್ತರ ಆರಿಸಿ.

| | ಪಟ್ಟಿ-I (ಊರು) | | ಪಟ್ಟಿ-II (ಕೇಂದ್ರ ಕಛೇರಿ) |
|---|---|---|---|
| a. | ಲಕ್ನೋ | i. | ಸೆಂಟ್ರಲ್ ಇನ್ಸ್ಟಿಟ್ಯೂಟ್ ಆಫ್ ಫಿಶರೀಸ್ ಎಜುಕೇಶನ್ |
| b. | ಮುಂಬಯಿ | ii. | ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಓಷಿಯಾನೋಗ್ರಾಫಿ |
| c. | ಗೋವಾ | iii. | ಇಂಡಿಯನ್ ಕೌನ್ಸಿಲ್ ಆಫ್ ಅಗ್ರಿಕಲ್ಚರಲ್ ರಿಸರ್ಚ್ |
| d. | ನವ ದೆಹಲಿ | iv. | ನ್ಯಾಷನಲ್ ಬ್ಯೂರೋ ಆಫ್ ಫಿಶ್ ಜೆನೆಟಿಕ್ ರಿಸೋರ್ಸಸ್ |

(1) a-iii, b-i, c-ii, d-iv (2) a-iv, b-i, c-ii, d-iii
(3) a-iv, b-iii, c-ii, d-i (4) a-iii, b-i, c-iv, d-ii

68. ವಯಸ್ಕ ಮಾನವನ ದೇಹದಲ್ಲಿ ಇರುವ ಒಟ್ಟು ಮೂಳೆಗಳ ಸಂಖ್ಯೆ __(i)__ ಮತ್ತು ವಯಸ್ಕ ಮಾನವನ ತಲೆಬುರುಡೆಯಲ್ಲಿ ಇರುವ ಒಟ್ಟು ಮೂಳೆಗಳ ಸಂಖ್ಯೆ __(ii)__.
(1) (i) 210, (ii) 20 (2) (i) 216, (ii) 26 (3) (i) 206, (ii) 22 (4) (i) 260, (ii) 24

69. ನಿದ್ರಾಹೀನತೆ, ಅಧಿಕ ಹೃದಯ ಬಡಿತ ಮತ್ತು ಉಸಿರಾಟದ ಲಯದ ಏರುಪೇರು _____ ಮಾಲಿನ್ಯದ ಪರಿಣಾಮಗಳಾಗಿವೆ.
(1) ವಾಯು (2) ಜಲ (3) ಮಣ್ಣು (4) ಶಬ್ದ

70. ಕೆಳಗಿನವುಗಳಲ್ಲಿ ಯಾವುದು ಆಮ್ಲದೊಂದಿಗೆ ವರ್ತಿಸಿ ಲವಣ ಮತ್ತು ನೀರು ಉಂಟು ಮಾಡುತ್ತದೆ ?
(1) CaO (2) $CO_2$ (3) CO (4) $SO_2$

71. __________ ಇದು ಸುಮಾರು 200 ವಸ್ತುಗಳ ಮಿಶ್ರಣವಾಗಿದೆ.
(1) ಕಲ್ಲಿದ್ದಲು ಅನಿಲ (2) ಕೋಕ್ (3) ಸಕ್ರಿಯಗೊಳಿಸಿದ ಇದ್ದಿಲು (4) ಕಲ್ಲಿದ್ದಲು ಡಾಂಬರು

ಕಚ್ಚಾ ಕಾರ್ಯಕ್ಕಾಗಿ ಸ್ಥಳ



Scanned with OKEN Scanner

72. ಒಂದು ಕಾರು ಪ್ರತಿ ಸೆಕೆಂಡಿಗೆ 25 ಮೀಟರ್ ಚಲಿಸಿದರೆ ಅದರ ವೇಗ ಕಿಲೋಮೀಟರ್/ಗಂಟೆ (km/hr.) ಗಳಲ್ಲಿ ಎಷ್ಟು ?

(1) 60 (2) 90 (3) 80 (4) 72

73. ಕೆಳಗಿನ ಸಂಖ್ಯಾ ಸರಣಿಯಲ್ಲಿ ಬಿಟ್ಟು ಹೋದ ಸಂಖ್ಯೆ :

25, 26, ____, 77, 128, 205

(1) 15 (2) 1 (3) 179 (4) 51

74. ಒಂದು ಕೆಲಸವನ್ನು ಪೂರೈಸಲು, A ಯು B ಗಿಂತ 50% ಹೆಚ್ಚು ಸಮಯ ತೆಗೆದುಕೊಳ್ಳುತ್ತಾನೆ. ಅವರಿಬ್ಬರೂ ಒಟ್ಟಾಗಿ ಕೆಲಸವನ್ನು ಸಂಪೂರ್ಣಗೊಳಿಸಲು 18 ದಿನಗಳನ್ನು ತೆಗೆದುಕೊಂಡರೆ, B ಆ ಕೆಲಸವನ್ನು ಮಾಡಲು ಎಷ್ಟು ಸಮಯ ತೆಗೆದುಕೊಳ್ಳುತ್ತಾನೆ ?

(1) 40 ದಿನಗಳು (2) 35 ದಿನಗಳು (3) 45 ದಿನಗಳು (4) 30 ದಿನಗಳು

75. ಎರಡು ಸಂಖ್ಯೆಗಳ ಮೊತ್ತ 30 ಮತ್ತು ಆ ಎರಡು ಸಂಖ್ಯೆಗಳ ನಡುವಿನ ವ್ಯತ್ಯಾಸ 16 ಆದರೆ, ಈ ಎರಡು ಸಂಖ್ಯೆಗಳ ಗುಣಲಬ್ಧ ಕಂಡುಹಿಡಿಯಿರಿ.

(1) 112 (2) 171 (3) 132 (4) 161

76. ಹೊಂದಿಸಿ ಬರೆಯಿರಿ :

| ಪಟ್ಟಿ-I (ಸಂಖ್ಯೆ) | ಪಟ್ಟಿ-II (ವಿಧ) |
|---|---|
| a. 144 | i. ಅವರ್ಗ ಸಂಖ್ಯೆ |
| b. 257 | ii. ಭಾಗಲಬ್ಧ (ಪರಿಮೇಯ) |
| c. $\frac{1}{4}$ | iii. ಅಭಾಗಲಬ್ಧ (ಅಪರಿಮೇಯ) |
| d. $\sqrt{2}$ | iv. ವರ್ಗ ಸಂಖ್ಯೆ |

(1) a-iv, b-i, c-ii, d-iii
(2) a-i, b-iii, c-iv, d-ii
(3) a-ii, b-iii, c-i, d-iv
(4) a-iii, b-i, c-ii, d-iv

77. 65 ಮತ್ತು 117 ರ ಮ.ಸಾ.ಅ. ವನ್ನು ಕಂಡುಹಿಡಿಯಿರಿ.

(1) 16 (2) 12 (3) 13 (4) 14

78. Z = 52 ಮತ್ತು BAT = 46 ಆದರೆ, 'ACT' ಇದಕ್ಕೆ ಸಮನಾಗಿರುತ್ತದೆ :

(1) 48 (2) 41 (3) 47 (4) 44

79. ಒಂದು ಘನಾಕೃತಿಯ 6 ಸಮತಲಗಳಿಗೆ ಬೇರೆ ಬೇರೆ 6 ಬಣ್ಣಗಳಿಂದ ಎಷ್ಟು ರೀತಿಯಲ್ಲಿ ಬಣ್ಣ ಹಚ್ಚಬಹುದು ?

(1) 90 (2) 30 (3) 180 (4) 60

80. ಬಿಟ್ಟು ಹೋಗಿರುವ ಸಂಖ್ಯೆಯನ್ನು ಕಂಡುಹಿಡಿಯಿರಿ :

| | | |
|---|---|---|
| 6 | 9 | 10 |
| 4 | 8 | 5 |
| 16 | 56 | ? |

(1) 54 (2) 40 (3) 45 (4) 72

81. 2026 ರ ಕ್ಯಾಲೆಂಡರ್‌ಗೆ ಸಮನಾಗಿರುವ ಕ್ಯಾಲೆಂಡರ್ ಹೊಂದಿರುವ ವರ್ಷ

(1) 2032 (2) 2029 (3) 2037 (4) 2030

ಕಚ್ಚಾ ಕಾರ್ಯಕ್ಕಾಗಿ ಸ್ಥಳ

82. ಈ ಕೆಳಗಿನ ಸಮೀಕರಣದಲ್ಲಿ $x$ ನ ಬೆಲೆ ಕಂಡುಹಿಡಿಯಿರಿ.

$$4\frac{1}{2} + 3\frac{1}{6} + x + 2\frac{1}{3} = 13\frac{2}{5}$$

(1) $7\frac{3}{4}$ (2) $5\frac{1}{2}$ (3) $1\frac{3}{4}$ (4) $3\frac{2}{5}$

**ನಿರ್ದೇಶನಗಳು : (ಪ್ರಶ್ನೆ ಸಂಖ್ಯೆ 83 ಮತ್ತು 84)**

ಕೆಳಗಿನ ಚಿತ್ರದಲ್ಲಿ ಮೂರು ಪರಸ್ಪರ ಛೇದಿಸುವ ವೃತ್ತಗಳಿವೆ. ಪ್ರತಿಯೊಂದು ವೃತ್ತವು ನಿರ್ದಿಷ್ಟ ವರ್ಗದ ಜನರನ್ನು ಪ್ರತಿನಿಧಿಸುತ್ತದೆ. ವಿವಿಧ ಪ್ರದೇಶಗಳನ್ನು a-g ವರೆಗೆ ಗುರುತಿಸಲಾಗಿದೆ. ಕೆಳಗಿನ ಪ್ರಶ್ನೆಗಳನ್ನು (83 ಮತ್ತು 84) ಓದಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.




83. ವರ್ಣಚಿತ್ರಕಾರ ಮತ್ತು ಗಾಯಕರಾಗಿದ್ದು, ನೃತ್ಯಪಟು ಅಲ್ಲದವರು ಯಾರು ?

(1) g (2) c (3) b (4) d

84. ಗಾಯಕರೂ ಅಲ್ಲದ, ನೃತ್ಯಪಟುವೂ ಅಲ್ಲದ ವರ್ಣಚಿತ್ರಕಾರರು ಯಾರು ?

(1) b (2) f (3) g (4) c

85. ಪಟ್ಟಿ-I ರಲ್ಲಿರುವ ವಿಷಯಗಳನ್ನು ಪಟ್ಟಿ-II ರಲ್ಲಿರುವ ವಿಷಯಗಳೊಂದಿಗೆ ಹೊಂದಿಸಿ ಸರಿ ಉತ್ತರವನ್ನು ಆರಿಸಿ.

| | ಪಟ್ಟಿ-I | | ಪಟ್ಟಿ-II |
|---|---|---|---|
| a. | ಯುರೇನಿಯಂ 235 | i. | ಮಂದಕಾರಿ (ಮಾಡರೇಟರ್) |
| b. | ಕರಿಸೀಸ | ii. | ನಿಯಂತ್ರಣ ಸರಳು |
| c. | ಕ್ಯಾಡ್ಮಿಯಂ | iii. | ಟ್ರಾನ್ಸ್‌ಯುರೇನಿಕ್ ಧಾತು |
| d. | ಪ್ಲುಟೋನಿಯಂ | iv. | ಇಂಧನ |

(1) a-iv, b-i, c-ii, d-iii
(2) a-ii, b-iii, c-iv, d-i
(3) a-iii, b-iv, c-ii, d-i
(4) a-iii, b-iv, c-i, d-ii

86. ಅಂತರ್‌ಗ್ರಹ ಯೋಜನೆಯ ಭಾಗವಾಗಿ ಮಂಗಳ ಗ್ರಹಕ್ಕೆ ಬಾಹ್ಯಾಕಾಶ ಮಿಷನ್ (Mar's Orbiter Mission) ಅನ್ನು ಕಳುಹಿಸಿದ ಏಷ್ಯಾ ಖಂಡದ ಮೊದಲ ರಾಷ್ಟ್ರ :

(1) ಜಪಾನ್ (2) ಚೀನಾ (3) ಸಿಂಗಾಪೂರ್ (4) ಭಾರತ

87. ಡಿಟಿಹೆಚ್ (ಡೈರೆಕ್ಟ್ ಟು ಹೋಮ್) ಯಾವುದರಿಂದ ಸಂಜ್ಞೆಗಳನ್ನು ಪಡೆಯುತ್ತದೆ ?

(1) ಖಗೋಳ ಉಪಗ್ರಹ (2) ಧ್ರುವೀಯ ಉಪಗ್ರಹ
(3) ಭೂ ಸ್ಥಿರ ಉಪಗ್ರಹ (4) ದಿಕ್ಸೂಚಕ (ನೆವಿಗೇಶನ್) ಉಪಗ್ರಹ

ಕಚ್ಚಾ ಕಾರ್ಯಕ್ಕಾಗಿ ಸ್ಥಳ



Scanned with OKEN Scanner

88. ಕಾಂತೀಯ ಅನುರಣನ ಪ್ರತಿಬಿಂಬ (MRI) ದ ಮೂಲಕ ದೇಹದ ಆಂತರಿಕ ಅವಯವಗಳ ಚಿತ್ರಗಳನ್ನು ಪಡೆಯಲು ಯಾವುದನ್ನು ಬಳಸಲಾಗುತ್ತದೆ ?

(1) ಲೇಸರ್
(2) ಕ್ಷ-ಕಿರಣ
(3) ಮಾನವನ ದೇಹದಲ್ಲಿರುವ ಕಾಂತೀಯ ಸಂಕೇತಗಳು
(4) ಮಾನವನ ದೇಹದಲ್ಲಿರುವ ವಿದ್ಯುತ್ ಸಂಕೇತಗಳು

89. ಭೂಮಿಯ ಕಾಂತತ್ವ ಗುಣವು ಯಾವುದರಿಂದ ಉಂಟಾಗುತ್ತದೆ ?

(1) ಸೋಲಾರ್ ಪರಿಣಾಮ
(2) ಡೈನಮೋ ಪರಿಣಾಮ
(3) ಮ್ಯಾಗ್ನಸ್ ಪರಿಣಾಮ
(4) ಡಾಪ್ಲರ್ ಪರಿಣಾಮ

90. ಉಷ್ಣ ವಿದ್ಯುತ್ ಸ್ಥಾವರಗಳು ಮತ್ತು ಕೈಗಾರಿಕೆಗಳಲ್ಲಿ ಹೊರಹೋಗುವ ಅನಿಲಗಳಿಂದ ಕಣರೂಪದ ವಸ್ತುಗಳನ್ನು ತೆಗೆದುಹಾಕಲು ಯಾವ ಸಾಧನವನ್ನು ಸಾಮಾನ್ಯವಾಗಿ ಬಳಸಲಾಗುತ್ತದೆ ?

(1) ನಿಷ್ಕಾಸ ಫ್ಯಾನ್‌ಗಳು
(2) ಹೀರಿಕೊಳ್ಳುವ ಗೋಪುರಗಳು
(3) ಸ್ಥಾಯೀ ವಿದ್ಯುತ್ತಿನ ಅವಕ್ಷೇಪಕ
(4) ಉತ್ತೇರಕ ಪರಿವರ್ತಕ

91. ಟಿ.ಬಿ.ಜಿ.ಆರ್. (T.B.G.R.) ಅನ್ನು ವಿಸ್ತರಿಸಿ.

(1) ಟ್ರಾಪಿಕಲ್ ಬಾಟನಿಕಲ್ ಜೆನೇರಾ ಆ್ಯಂಡ್ ರಿಸರ್ಚ್
(2) ಟ್ರಾಪಿಕಲ್ ಬಾಟನಿಕಲ್ ಗಾರ್ಡನ್ ಆ್ಯಂಡ್ ರಿಸರ್ಚ್
(3) ಟ್ರಾಪಿಕಲ್ ಬಾಟನಿಕಲ್ ಜೆನೆಟಿಕ್ಸ್ ಆ್ಯಂಡ್ ರಿಸರ್ಚ್
(4) ಟೆಂಪರೇಟ್ ಬಯೋಟೆಕ್ನಾಲಜಿ ಗಾರ್ಡನ್ ಆ್ಯಂಡ್ ರಿಸರ್ಚ್

92. "ಆಡಳಿತದಲ್ಲಿ ಪ್ರಾಮಾಣಿಕತೆ" ಯ ಆಧಾರ ಸ್ತಂಭಗಳನ್ನು ಗುರುತಿಸಿ.

(a) ಅಧಿಕಾರ (ಅಥಾರಿಟಿ) (b) ಸಮಗ್ರತೆ (c) ಪಾರದರ್ಶಕತೆ (d) ವೇಗ (e) ಜವಾಬ್ದಾರಿ (ಅಕೌಂಟಬಿಲಿಟಿ)

(1) (a), (b) ಮತ್ತು (c)
(2) (b), (d), ಮತ್ತು (e)
(3) (a), (b), (c) ಮತ್ತು (e)
(4) (b), (c) ಮತ್ತು (e)

93. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ ಮತ್ತು ನೀಡಲಾದ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ.

**ಪ್ರತಿಪಾದನೆ (A) :** ಲೋಹೀಯ ವಸ್ತುಗಳಿಂದ ಮಾಡಿದ ವಿದ್ಯುತ್ ಉಪಕರಣಗಳಿಗೆ ಮೂರು ತಂತಿಗಳ ವಿದ್ಯುತ್ ವೈರಿಂಗ್ ಇರುತ್ತದೆ. ಆದರೆ, ವಿದ್ಯುತ್ ಬಲ್ಬ್‌ನಲ್ಲಿ ಎರಡು ತಂತಿಗಳ ವಿದ್ಯುತ್ ವೈರಿಂಗ್ ಇರುತ್ತದೆ.

**ಕಾರಣ (R) :** ತ್ರೀ-ಪಿನ್ ಸಂಪರ್ಕಗಳು ವಿದ್ಯುತ್ ಆಘಾತದ ಸಾಧ್ಯತೆಯನ್ನು ಕಡಿಮೆ ಮಾಡುತ್ತವೆ.

(1) ಪ್ರತಿಪಾದನೆ (A) ಸರಿಯಾಗಿದೆ, ಆದರೆ ಕಾರಣ (R) ತಪ್ಪಾಗಿದೆ.
(2) ಪ್ರತಿಪಾದನೆ (A) ತಪ್ಪಾಗಿದೆ ಆದರೆ ಕಾರಣ (R) ಸರಿಯಾಗಿದೆ.
(3) ಪ್ರತಿಪಾದನೆ (A) ಹಾಗೂ ಕಾರಣ (R) ಎರಡೂ ಸರಿಯಾಗಿವೆ, ಹಾಗೂ (R), (A) ಯ ಸರಿಯಾದ ವಿವರಣೆಯಾಗಿದೆ.
(4) ಪ್ರತಿಪಾದನೆ (A) ಹಾಗೂ ಕಾರಣ (R) ಎರಡೂ ಸರಿಯಾಗಿವೆ, ಆದರೆ (R), (A) ಯ ಸರಿಯಾದ ವಿವರಣೆಯಾಗಿಲ್ಲ.

94. KAMINI - ಒಂದು :

(1) ಕಡಿಮೆ ಎತ್ತರದ ಗುರಿಯನ್ನು ಗುರುತಿಸುವ ಚರ ವಿಚಕ್ಷಣ ರಾಡಾರ್ ವ್ಯವಸ್ಥೆ.
(2) ಥೋರಿಯಂ ಆಧಾರಿತ ಥರ್ಮಲ್ ಬ್ರೀಡರ್ ರಿಯಾಕ್ಟರ್.
(3) 3D ಮಧ್ಯಮ ವ್ಯಾಪ್ತಿಯ ವಿಚಕ್ಷಣ ರಾಡಾರ್ ವ್ಯವಸ್ಥೆ.
(4) ಪ್ಲುಟೋನಿಯಂ ಆಧಾರಿತ ಫಾಸ್ಟ್ ಬ್ರೀಡರ್ ರಿಯಾಕ್ಟರ್.

ಕಚ್ಚಾ ಕಾರ್ಯಕ್ಕಾಗಿ ಸ್ಥಳ



Scanned with OKEN Scanner

95. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

ಹೇಳಿಕೆ I : ನೀತಿಶಾಸ್ತ್ರ ಸಂಹಿತೆಯು ಸಂಸ್ಥೆಯೊಳಗಿನ ಸದಸ್ಯರ ನಿರೀಕ್ಷಿತ ನಡತೆಯನ್ನು ನಿರ್ದಿಷ್ಟಪಡಿಸುವ ನಿಯಮಗಳು ಮತ್ತು ಗುಣಮಟ್ಟಗಳನ್ನು ಒಳಗೊಂಡ ಗುಂಪಾಗಿದೆ.

ಹೇಳಿಕೆ II : ನಡವಳಿಕೆ ಸಂಹಿತೆಯು ಸಂಸ್ಥೆಯ ಪ್ರತಿಯೊಂದು ಮೂಲಭೂತ ಮೌಲ್ಯಗಳು, ತತ್ವಗಳು ಮತ್ತು ಆದರ್ಶಗಳನ್ನು ವಿವರಿಸುವ ಮಾರ್ಗಸೂಚಿಗಳ ಗುಂಪಾಗಿದೆ.

ಈ ಕೆಳಗಿನ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ.

(1) ಹೇಳಿಕೆ I ಮತ್ತು ಹೇಳಿಕೆ II ಎರಡೂ ಸರಿ.
(2) ಹೇಳಿಕೆ I ಸರಿ ಆದರೆ ಹೇಳಿಕೆ II ತಪ್ಪು.
(3) ಹೇಳಿಕೆ I ಮತ್ತು ಹೇಳಿಕೆ II ಎರಡೂ ತಪ್ಪು.
(4) ಹೇಳಿಕೆ I ತಪ್ಪು ಆದರೆ ಹೇಳಿಕೆ II ಸರಿ.

96. ಪೋಲೀಸರು __(i)__ ಅಥವಾ ಒಲವು ಇಲ್ಲದೇ, ದ್ವೇಷ ಅಥವಾ __(ii)__ ಇಲ್ಲದೇ ದೃಢವಾಗಿ ಮತ್ತು ನಿಷ್ಪಕ್ಷಪಾತವಾಗಿ ಕಾನೂನನ್ನು ಜಾರಿಗೊಳಿಸಬೇಕು.

(1) (i) ಧೈರ್ಯ ಮತ್ತು (ii) ಕರುಣೆ
(2) (i) ವಿಶ್ವಾಸ (ii) ನಂಬಿಕೆ
(3) (i) ಭಯ ಮತ್ತು (ii) ಸೇಡಿನ ಮನೋಭಾವ
(4) (i) ಭರವಸೆ ಮತ್ತು (ii) ದೃಢನಂಬಿಕೆ

97. ಭಾರತದ ಪ್ರಥಮ ಮಲ್ಟಿ ಲೇನ್ ಫ್ರೀ ಫ್ಲೋ (MLFF) ಅಡೆತಡೆ ರಹಿತ ಟೋಲ್ ವ್ಯವಸ್ಥೆಯನ್ನು ಗುಜರಾತಿನ NH-48 ರ ________ ಟೋಲ್ ಪ್ಲಾಜಾದ ಸೂರತ್ – ಭರೂಚ್ ಸೆಕ್ಷನ್‌ನಲ್ಲಿ ಪ್ರಾರಂಭಿಸಲಾಗಿದೆ.

(1) ವಡೋದರಾ
(2) ಚೋರಯಾಸಿ
(3) ಗೋಲ್ಡನ್ ಚೋಕ್ಡಿ
(4) ಅಹ್ಮದಾಬಾದ್

98. ಪ್ರಸ್ತುತ ಇರುವ ಅರಣ್ಯ ಹಕ್ಕುಗಳ ಕಾಯ್ದೆ ಕೋಶಗಳನ್ನು ಸುಧಾರಿಸಲು ಮತ್ತು ಹೆಚ್ಚು ಸಂಘಟಿತ 'ಒನ್–ಸ್ಟಾಪ್' ಸಮನ್ವಯ ಘಟಕಗಳನ್ನು ಸ್ಥಾಪಿಸಲು ಯಾವ ಕೇಂದ್ರ ಸಚಿವಾಲಯವು ಯೋಜನೆಗಳನ್ನು ಘೋಷಿಸಿದೆ ?

(1) ಗ್ರಾಮೀಣಾಭಿವೃದ್ಧಿ ಸಚಿವಾಲಯ
(2) ಬುಡಕಟ್ಟು ವ್ಯವಹಾರಗಳ ಸಚಿವಾಲಯ
(3) ಪಂಚಾಯತ್ ರಾಜ್ ಸಚಿವಾಲಯ
(4) ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ

99. ಮದ್ಯ ಮತ್ತು ಮಾದಕ ದ್ರವ್ಯಗಳ ಉತ್ಪಾದನೆ, ಮಾರಾಟ ಅಥವಾ ಸಾಗಣೆಯನ್ನು ಕಾನೂನಿನ ಮೂಲಕ ನಿಷೇಧಿಸುವುದನ್ನು ಹೀಗೆ ಕರೆಯಲಾಗುತ್ತದೆ :

(1) ಸ್ಯಾಂಕ್ಷನಿಂಗ್
(2) ಲೀಗಲೈಸಿಂಗ್
(3) ಲೈಸೆನ್ಸಿಂಗ್
(4) ಬೂಟ್‌ಲೆಗ್ಗಿಂಗ್

100. ದ್ವಿತೀಯ ಪಿಯುಸಿ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯಕ್ಕೆ ಹಾಜರಾಗಲು ಪಿಯು ಮಂಡಳಿಯು ಅಧಿಕೃತ ಆದೇಶವನ್ನು ನಿಮಗೆ ಕಳುಹಿಸಿದೆ. ಆದರೆ ನಿಮ್ಮ ಮಗಳು ಅದೇ ಪರೀಕ್ಷೆಗೆ ಹಾಜರಾಗಿದ್ದಾಳೆ. ಆಗ ನಿಮ್ಮ ಕ್ರಮವೇನು ?

(1) ನಿಮ್ಮ ಮಗಳು ಅದೇ ಪರೀಕ್ಷೆಗೆ ಹಾಜರಾಗಿದ್ದಾಳೆಂದು ಔಪಚಾರಿಕವಾಗಿ ಘೋಷಿಸಿ, ಮೌಲ್ಯಮಾಪನ ಕಾರ್ಯದಿಂದ ವಿನಾಯಿತಿ ಕೇಳುತ್ತೀರಿ.
(2) ನಿಮ್ಮ ಮಗಳ ಉತ್ತರ ಪತ್ರಿಕೆಯನ್ನು ಹೊರತುಪಡಿಸಿ, ಮೌಲ್ಯಮಾಪನಕ್ಕಾಗಿ ಬೇರೆಯವರ ಉತ್ತರ ಪತ್ರಿಕೆಗಳನ್ನು ನೀಡಲು ವಿನಂತಿಸುತ್ತೀರಿ.
(3) ಉತ್ತರ ಪತ್ರಿಕೆಗಳು ಕೋಡಿಂಗ್ ಆಗುವುದರಿಂದ ಅದೇ ಪರೀಕ್ಷೆಗೆ ನಿಮ್ಮ ಮಗಳು ಹಾಜರಾಗಿರುವ ಬಗ್ಗೆ ಘೋಷಿಸುವುದಿಲ್ಲ.
(4) ಸರ್ಕಾರಿ ಆದೇಶವಾಗಿರುವುದರಿಂದ, ನಿಮ್ಮ ಮಗಳು ಅದೇ ಪರೀಕ್ಷೆಗೆ ಹಾಜರಾಗಿದ್ದಾಳೆಂದು ಘೋಷಿಸದೇ ಮೌಲ್ಯಮಾಪನ ಕಾರ್ಯಕ್ಕೆ ವರದಿ ಮಾಡಿಕೊಳ್ಳುತ್ತೀರಿ.

4x10 = 40
10x10 = 100

ಕಚ್ಚಾ ಕಾರ್ಯಕ್ಕಾಗಿ ಸ್ಥಳ

12 – 900
1 – 25
2 – 10
3 – 75
4 – 100
4 – 100
4 – 100
4 – 100
4 – 100
2 – 10
2 – 10
2 – 10
2 – 10
2 – 10
2 – 10